70ರ ಪ್ರಾಯದ ಗೋದಾವರಿ ಆಯಿ ತನಗೆ ಪ್ರೀತಿ ಕೊಟ್ಟರು. ಆಯಿ ಹುಟ್ಟಿದ್ದು ಧಾರವಾಡದ ದೇಶಪಾಂಡೆ ಮನೆತನದಲ್ಲಿ. ತಕ್ಕಮಟ್ಟಿಗೆ ಓದಿ ಆಧುನಿಕತೆ ಮೈಗೂಡಿಸಿಕೊಂಡಿದ್ದರು. ಅಂತಹ ಆಯಿ ಲಗ್ನವಾಗಿ ಬಂದಿದ್ದು ಪರಮ ಸಂಪ್ರದಾಯಸ್ಥರಾದ ಜೋಶಿ ಮನೆತನಕ್ಕೆ. ಮನೆಯ ಪೂಜೆ ಪುರಸ್ಕಾರ, ಅತೀ ಮಡಿವಂತಿಕೆ ಆಯಿಗೆ ಉಸಿರುಗಟ್ಟಿಸಿತ್ತಂತೆ. ಪುಣ್ಯಕ್ಕೆ ಅತ್ತೆ ಒಳ್ಳೆಯವರು, ಗಂಡ ಸಾಧು ಸ್ವಭಾವದವರು. ಹೊರಗಾದಾಗ ಅಸ್ಪೃಶ್ಯರಂತೆ ದೂರ ಕೂಡುವ ಮತ್ತು ಮಡಿ, ಪೂಜೆ, ಉಪವಾಸ ಮಾಡುವ ಅನಿವಾರ್ಯತೆಗೊಳಗಾಗಿ ಒದ್ದಾಡಿದರಂತೆ.

ಆಯಿಗೆ ಚೊಚ್ಚಿಲು ಮಗಳು ಅನಿತಾ ಹುಟ್ಟಿದಳಂತೆ. ನಂತರ ಅನಂತ, ಅಚ್ಯುತ, ಅರವಿಂದ ಮೂವರು ಗಂಡು ಮಕ್ಕಳು. ಅನಿತಾ ತುಂಬ ಚಂದವಿದ್ದಳಂತೆ. ತುಂಬ ಚೆನ್ನಾಗಿ ಹಾಡುತ್ತಿದ್ದಳಂತೆ. 18ರ ಪ್ರಾಯದಲ್ಲಿ ಆಯಿ, 'ಇಷ್ಟು ಬೇಗ ಬೇಡ' ಎಂದು ಹಟ ಮಾಡಿದರೂ ಕೇಳದೆ ಆಕೆಯ ಅತ್ತೆ, ಮಾವ, ಗಂಡ ಅನಿತಾಳ ಲಗ್ನವನ್ನು ಸುದರ್ಶನ ಪುಣೇಕರನೊಡನೆ ಮಾಡಿದರಂತೆ. ಆರು ತಿಂಗಳಷ್ಟೇ ಸಂಸಾರ, ಪ್ರವಾಸ ಹೋಗಿದ್ದಾಗ ನೀರಿನಲ್ಲಿ ಮುಳುಗಿ ಸುದರ್ಶನ ಸತ್ತ. ಮೊದಲೇ ಸಂಪ್ರದಾಯಸ್ಥ ಪುರೋಹಿತರ ಮನೆ. ಮಗನನ್ನು ನುಂಗಿದ ಪಾಪಿ ಎಂದು ಕೊಟ್ಟ ಮನೆ ದೂರ ಸರಿದು ತವರೇ ಶಾಶ್ವತವಾಯಿತು. ಚಿಕ್ಕ ಪ್ರಾಯದ ಚಂದದ ಹುಡುಗಿ ಹಾದಿ ತಪ್ಪಿದರೆ ಮನೆತನದ ಮರ್ಯಾದೆ ಹಾಳು ಎಂದು ಕೇಶಮುಂಡನ ಮಾಡಿಸಲು ನಿರ್ಧರಿಸಿದರು. ಅನಿತಾ ಅತ್ತಳಂತೆ, ಆಯಿ ಹಾರಾಡಿ ಪ್ರತಿಭಟಿಸಿದರು. ತಲೆಕೂದಲು ತೆಗೆಸಲೇಬೇಕು ಎಂದು ಪಟ್ಟುಹಿಡಿದು ಅರವಿಂದನ ಅಜ್ಜ, ಅಜ್ಜಿ, ಅಪ್ಪ ಕ್ಷೌರಿಕನನ್ನು ಕರೆತಂದರಂತೆ. ಮಗಳನ್ನು ಮಹಡಿಯಿಂದ ಎಳೆದು ತರಲು ಹೋದಾಗ ಬಿಳೀ ಸೀರೆ ಉಟ್ಟು ಗೋದಾವರಿ ಆಯಿ ಕ್ಷೌರಿಕನ ಮುಂದೆ ತಲೆತಗ್ಗಿಸಿಕೂತರು.

'ಏಳೇ, ನೀನು ಮುತ್ತೈದೆ' ಎಂದು ಅವರು ಚೀರಿದಾಗ. 'ನಾನು ಮದುವೆ, ಮಕ್ಕಳು, ಸಂಸಾರ ಎಲ್ಲ ಕಂಡಿದ್ದೇನೆ, ಇನ್ನು ಸನ್ಯಾಸಿಯಾಗಿ ಬದುಕಬಲ್ಲೆ, ನನ್ನ ತಲೆ ಬೋಳಿಸಿಯೇ ನನ್ನ ಮಗಳ ತಂಟೆಗೆ ಹೋಗಿ' ಎಂದು ಆಕೆ ಪಟ್ಟು ಹಿಡಿದರಂತೆ. ಕೊನೆಗೆ ಅನಿತಾ ಸಕೇಶಿಯಾಗಿ ಬದುಕಲಿ. ಅವಳು ಹಾದಿ ತಪ್ಪಿದರೆ ತಾಯಿಯೇ ಹೊಣೆ ಎಂದು ತೀರ್ಮಾನವಾಯ್ತು. ಆದರೆ ತಿಂಗಳೊಳಗೇ ಅನಿತಾ ನೇಣು ಹಾಕಿಕೊಂಡಳಂತೆ!

'ಒಪ್ಪತ್ತೂಟ ವೈಧವ್ಯದ ನಿಯಮಗಳನ್ನು ಪಾಲಿಸಲಾರೆ. ಗಂಡಿಗೆ ಹೆಂಡತಿ ಸತ್ತರೆ ಮರುಮದುವೆ ಮಾಡುತ್ತೀರಿ. ಹೆಣ್ಣಿಗೇಕೆ ಇಂಥ ಬದುಕು? ಜೀವಮಾನವಿಡೀ ಕಾಮನೆಗಳನ್ನು ನುಂಗಿ ಸನ್ಯಾಸಿಯಾಗಿ ಬದುಕಲಾರೆ. ನನಗೊಂದು ಜೀವನ ಕೊಡದ ನಿಮಗೆ ಧಿಕ್ಕಾರ' ಎಂದು ಡೆತ್‌ನೋಟ್ ಬರೆದಿಟ್ಟಿದ್ದಳಂತೆ.

ಆಯಿ ಇದನ್ನೆಲ್ಲ ಹೇಳುತ್ತ ಬಿಕ್ಕಿಬಿಕ್ಕಿ ಅತ್ತಿದ್ದರು. ನಿನ್ನಲ್ಲಿ ಅನಿತಾಳನ್ನ ಕಾಣ್ತಿದ್ದೇನೆ ಅಂದಿದ್ದರು. ಅನಿತಾಳಿಗೆ ತೋರಿಸುವಂತದ್ದೇ ಪ್ರೀತಿ ತನಗೆ ತೋರಿಸಿದ್ದಾರೆ, ಆಯಿ ಅಪ್ಪಟ ಚಿನ್ನ.

ಮಕ್ಕಳಿಗೆ 2 ವರ್ಷ ತುಂಬಿದಾಗ ತನ್ನನ್ನು ಕರೆದು ಹೇಳಿದ್ದರು, 'ಮಗೂ, ನೀನು ಹೇಗಾದರೂ ಇರು ಬೇಡವೆನ್ನುವುದಿಲ್ಲ, ಆದರೆ ಮಕ್ಕಳು ಶಾಲೆಗೆ ಸೇರುವಾಗ ತಂದೆಯ ಹೆಸರು ಬೇಕು. ಅವರು ಕೀಳರಿಮೆ ಇಲ್ಲದೆ ಸಮಾಜದಲ್ಲಿ ಬದುಕಬೇಕು. ಅರವಿಂದ ನಿನ್ನನ್ನು ಶೋಷಿಸಲಾರ. ಲಗ್ನವಾಗಿರಿ. ಮಕ್ಕಳಿಗೆ ತಂದೆ, ತಾಯಿ ಸಮಾಜದಲ್ಲಿ ಸ್ಥಾನಮಾನ ಸಿಗುತ್ತೆ. ನಿನಗೂ ಪ್ರೀತಿಯ ಭದ್ರ ಬದುಕು ಸಿಗುತ್ತೆ. ಯೋಚಿಸು ಒತ್ತಾಯವಿಲ್ಲ' ಎಂದರು. ಅರವಿಂದ ಸುಮ್ಮನಿದ್ದ. 'ಆಯೀ, ನೀವು ನನಗೆ ಹೆತ್ತತಾಯಿಯ ಪ್ರೀತಿ ಕೊಟ್ಟಿದ್ದೀರಿ. ನಿಮ್ಮ ಮಗ ಅಪ್ಪಟ ಚಿನ್ನ, ನಿಮ್ಮ ಮಗನೊಡನೆ ನಾನು ಜೀವಮಾನವಿಡೀ ಸಂತೋಷವಾಗಿ ಬದುಕಬಲ್ಲೆ ಲಗ್ನವಾಗ್ತೇನೆ' ಎಂದು ಒಪ್ಪಿಕೊಂಡೆ.

ಮನೆದೇವರ ಪೂಜೆ ಮುಗಿಸಿ ಆಯಿಯ ತಮ್ಮಂದಿರನ್ನು ಕರೆತರುವುದಾಗಿ ಹೋಗಿದ್ದಾರೆ, ನಾಳೆ ಬರ್ತಾರೆ. ಎಲ್ಲರ ಹರಕೆಯೊಡನೆ ಅರವಿಂದನೊಡನೆ ನನ್ನ ಬದುಕು.

ತನಗರಿವಿಲ್ಲದೆಯೇ ಕಾತ್ಯಾಯಿನಿಗೆ ನಿದ್ದೆ ಬಂತು. ಬೆಳಿಗ್ಗೆ ಎದ್ದು ತಲೆಸ್ನಾನ ಮಾಡಿ ಹೊರಬಂದಾಗ ಕರೆಗಂಟೆ ಬಾರಿಸಿತು. ಆಯಿ, ಅರವಿಂದ, ದಿಶಾ, ನಿಶಾ ಒಳಬಂದರು. ತುಸು ಹೊತ್ತಿನಲ್ಲೇ ಅಮ್ಮ, ಇಬ್ಬರು ಅಜ್ಜಿಯರು ಬಂದು - ಮನೆ ತುಂಬಿಕೊಂಡಿತು. ಜೊತೆಗೆ ಮನಸ್ಸೂ.

●